ಶ್ರೀ ಎಂ. ವೀರಯ್ಯ ಸ್ವಾಮಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ಈಗಾಗಲೇ ತಾವು ಉತ್ತರ ಕೊಡುವಾಗ ಕೇಂದ್ರ ಸರ್ಕಾರದ ೧೮.೭೫ ಕೋಟಿ ರೂಪಾಯಿ ಬಗ್ಗೆ ಪ್ರಸ್ತಾಪ ಮಾಡಿದ್ದರು. ಅದರಲ್ಲಿ ಖರ್ಚು ಆಗಿರುವುದು ೨೪೩.೭೫ ರೂ. ಗಳು ಎಂದು ತಿಳಿಸಿದ್ದಾರೆ. ಕೇಂದ್ರ ಸರ್ಕಾರದ ದುಡ್ಡನ್ನು ಪೂರ್ತಿಯಾಗಿ ಏತಕ್ಕೆ ಬಳಸಿಕೊಳ್ಳಲಿಲ್ಲ ? ಆ ಹಣವನ್ನು ಬೇರೆ ಕಾರ್ಯಕ್ರಮಕ್ಕೆ ಉಪಯೋಗ ಮಾಡಿದ್ದೀರಾ ? ಬಿಲ್ಡಿಂಗ್ ಕಟ್ಟಲು ತಡ ಆಗುತ್ತಿದ್ದರೂ ಸಿಬ್ಬಂದಿ ವೆಚ್ಚ ಮಾತ್ರ ಈ ಐ. ಪಿ. ಪಿ. ಯೋಜನೆಯಲ್ಲಿ ಆಗಿದೆ, ಉಳಿದ ಹಣವನ್ನು ಯಾವುದಕ್ಕೆ ಖರ್ಚು ಮಾಡಿದ್ದೀರಿ ?

ಶ್ರೀ ಬಿ. ರಾಚಯ್ಯ.—ಬಹಳ ಹಣ ಉಳಿದಿಲ್ಲ. ಅವರು ಅಡ್ವಾನ್ಸ್ ಎಷ್ಟು ಖರ್ಚು ಮಾಡುತ್ತಾರೆ, ಅಷ್ಟು ಬಿಡುಗಡೆಮಾಡಿದ್ದೇವೆ. ಹೆಚ್ಚು ಹಣ ಉಳಿತಾಯ ಆಗಿಲ್ಲ. ಸಿಬ್ಬಂದಿಗಾಗಿ ಮಾತ್ರ ಹಣವನ್ನು ಖರ್ಚು ಮಾಡಲಾಗಿದೆ, ಪಿ. ಡಬ್ಲ್ಯೂ. ಡಿ. ಇಲಾಖೆಯಿಂದ ಸಿಬ್ಬಂದಿಗಳನ್ನು ಹಾಕಬೇಕು. ಇದಕ್ಕಾಗಿ ಸ್ವಲ್ಪ ತಡ ಆಯಿತು ನಮ್ಮ ಸಿಬ್ಬಂದಿಯನ್ನು ಹಾಕುವುದೂ ತಡವಾಗಿದೆ. ಈ ಕಟ್ಟಡದ ಕೆಲಸ ಈ ಕಾರಣದಿಂದ ೩೧-೩-೮೮ರಲ್ಲಿ ಆಗಬೇಕಾಗಿತ್ತು. ಅದು ಒಂದು ವರ್ಷ ಮುಂದೆ ಹೋಗಿದೆ.

ಶ್ರೀ ಕೆ. ಬಿ. ಶಾಣಪ್ಪ.—ಮಾನ್ಯ ಅಧ್ಯಕ್ಷರೇ, ನಾರ್ತ್ ಕೆನರಾದಲ್ಲಿ ಈ ಯೋಜನೆ ಉಪಯೋಗ ಆಗಬೇಕಾಗಿತ್ತು. ಸುಮಾರು ೮೦ ಕೋಟಿ ರೂಪಾಯಿ ವರ್ಲ್ಡ್ ಬ್ಯಾಂಕ್‌ನಿಂದ ಐ. ಪಿ. ಪಿ. ಯೋಜನೆಗಾಗಿ ಉಪಯೋಗ ಮಾಡಿದ್ದು. ನಮ್ಮ ಕಾನ್ಸ್‌ಸ್ಟಿಟ್ಯೂಯೆನ್ಸಿ ಗುಲ್ಬರ್ಗಾದಲ್ಲಿ ಐ ಪಿ. ಪಿ. ಬಿಲ್ಡಿಂಗ್ ಹಾಫ್ ಕನ್ಸ್‌ಟ್ರಕ್ಷನ್ ಆಗದೆ ನಿಂತಿದೆ. ಪ್ರಾಜೆಕ್ಟ್ ಆಫೀಸರ್ಸ್ ಅನ್ನು ಕೇಳಿದರೆ ನಮಗೆ ಹಣ ಬಂದಿಲ್ಲ ಎನ್ನುತ್ತಾರೆ. ತಾವು ಹಣವನ್ನು ಬಿಡುಗಡೆ ಮಾಡಿದ್ದೇವೆಂದು ಹೇಳುತ್ತೀರಿ. ಹಣವನ್ನೂ ಪೂರ್ತಿ ಬಳಸಿಕೊಂಡಿಲ್ಲ. ಅವರು ಹಣ ಬಂದಿಲ್ಲವೆಂದು ಹೇಳುತ್ತಾರೆ. ನೀವು ಹೀಗೆ ಹೇಳುತ್ತಿದ್ದೀರಿ, ಆದ್ದರಿಂದ ತಾವು ದಯವಿಟ್ಟು ಇದರ ಬಗ್ಗೆ ಸರಿಯಾದ ವಿವರವನ್ನು ಕೊಡಬೇಕು.

ಶ್ರೀ ಬಿ ರಾಚಯ್ಯ.—ಕೆಲಸ ಅರ್ಧಂಬರ್ಧ ಆಗಿದೆ ನಿಜ. ಕೆಲವು ಕಡೆ ಕಂಟ್ರಾಕ್ಟರ್ ಪೂರ್ಣವಾಗಿ ಕೆಲಸ ಮಾಡಿಲ್ಲ, ಒಂದಲ್ಲ ಒಂದು ಕಾರಣದಿಂದ ಕೆಲಸ ನಿಧಾನವಾಗಿದೆ. ನಾವು ಹಣವನ್ನು ಸಕಾಲದಲ್ಲಿ ಬಿಡುಗಡೆ ಮಾಡುತ್ತೇವೆ. ಪ್ರಸಕ್ತ ಕಂಟ್ರಾಕ್ಟರ್‌ನಿಂದ ಕೆಲಸ ನಿಧಾನವಾಗುತ್ತಿರುವುದರಿಂದ ಇದನ್ನು ಲ್ಯಾಂಡ್ ಆರ್ಮಿಗೆ ಕೊಡಬೇಕೆಂದು ತೀರ್ಮಾನ ಮಾಡಿದ್ದೇವೆ.

ಶ್ರೀ ಎಂ. ವೀರಯ್ಯ ಸ್ವಾಮಿ.—ನಮ್ಮ ಸನ್ಮಾನ್ಯ ಸದಸ್ಯ ಮಿತ್ರರು ಹೇಳಿದ ಹಾಗೆ ಸರ್ಕಾರ ೧೮ ೫೭ ಕೋಟಿ ರೂಪಾಯಿ ಬಿಡುಗಡೆ ಮಾಡಿದೆ ಎಂದು ಹೇಳಿದ್ದಾರೆ ಹಾಗೂ ಅದು ಹಣವು ಉಳಿದಿರುವ ಬಗ್ಗೆ ಸಹಾ ಹೇಳಿದ್ದಾರೆ. ಇದರ ಬಗ್ಗೆ ನಿಖರವಾಗಿ ತಾವು ಹೇಳಿಲ್ಲ. ಒಂದು ಕಡೆ ಹಣ ನೀಡಲಾಗಿದೆ ಎಂದು ತಾವು ಹೇಳುತ್ತೀರಿ. ನಿಮ್ಮ ಫಿಗರ್ಸ್ ಪ್ರಕಾರ ೧೮ ೫೭ ಕೋಟಿ ಮಾತ್ರ ಬಿಡುಗಡೆ ಮಾಡಿರುವುದು. ಇನ್ನೂ ೭೫ ಪರ್ಸೆಂಟ್ ಉಳಿದಿದೆ. ಅದಕ್ಕಾಗಿ ಬಿಲ್ಡಿಂಗ್ ಕೆಲಸ ನಿಂತಿದೆ. ಇಲ್ಲಿಗೆ ದುಡ್ಡು ಸಹ ಪೂರ್ತಿಯಾಗಿ ಕೊಟ್ಟಿಲ್ಲ.

ಶ್ರೀ ಬಿ. ರಾಚಯ್ಯ.— ನಾವು ಐ.ಪಿ.ಪಿ. ಯೋಜನೆ ಪ್ರಕಾರ ಎಷ್ಟು ಖರ್ಚು ಮಾಡಬೇಕಾಗಿತ್ತು ಅಷ್ಟನ್ನು ಬಿಡುಗಡೆ ಮಾಡಿದ್ದೇವೆ. ನಮಗೆ ಕೇಂದ್ರ ಸರ್ಕಾರದಿಂದ ೧೮ ಕೋಟಿ ರೂಪಾಯಿನಲ್ಲಿ ಇನ್ನೂ ಪೂರ್ತಿ ಬಂದಿಲ್ಲ.

ಗ್ರಾಮೀಣ ಪ್ರದೇಶದಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ತೆರೆಯುವುದು,

೧೩೫೯. ಶ್ರೀ ಜಿ. ಎಸ್. ಆಚಾರ್ (ಬೈಂದೂರು) ಮಾನ್ಯ ಆರೋಗ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಗ್ರಾಮೀಣ ಪ್ರದೇಶಗಳಲ್ಲಿ ಅನೇಕ ಕಡೆ ಪ್ರಾಥಮಿಕ ಆರೋಗ್ಯ ಕೇಂದ್ರ ಅಥವಾ ಪ್ರಾಥಮಿಕ ಆರೋಗ್ಯ ಘಟಕಗಳನ್ನು ತೆರೆಯುವ ಅವಶ್ಯಕತೆ ಇದೆ ಎಂಬುದನ್ನು ಸರ್ಕಾರ ಮನಗಂಡಿದೆಯೇ ?

ಆ) ಹಾಗಿದ್ದಲ್ಲಿ, ಹೊಸ ಆಸ್ಪತ್ರೆಗಳ ಮಂಜೂರಾತಿಗೆ ಸರ್ಕಾರದ ಮುಂದಿರುವ ಯೋಜನೆಗಳಾವುವು ?

ಇ) ಪರಿಶಿಷ್ಟ ವರ್ಗ ಮತ್ತು ಪರಿಶಿಷ್ಟ ಜಾತಿಯವರು ಅಧಿಕವಾಗಿರುವಲ್ಲಿ, ಆಸ್ಪತ್ರೆ ತೆರೆಯಲು ಪ್ರತ್ಯೇಕ ಯೋಜನೆ ಏನಾದರೂ ಇದೆಯೇ ?

ಶ್ರೀ ಬಿ. ರಾಚಯ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಹೌದು.

ಆ) ಕನಿಷ್ಟ ಅವಶ್ಯಕತೆ ಕಾರ್ಯಕ್ರಮದಡಿಯಲ್ಲಿ ಬಯಲು ಪ್ರದೇಶದಲ್ಲಿ ೫೦೦೦೦ ಗ್ರಾಮಾಣ ಜನಸಂಖ್ಯೆ ಮತ್ತು ಗುಡ್ಡಗಾಡು ಮತ್ತು ಆದಿವಾಸಿ ಪ್ರದೇಶದಲ್ಲಿ ೨೦೦೦೦ ಜನ ಸಂಖ್ಯೆಗೆ ಒಂದರಂತೆ ಪ್ರಾಥಮಿಕ ಆರೋಗ್ಯ ಕೇಂದ್ರವನ್ನು ಹಾಗೂ ಒಂದು ಲಕ್ಷ ಜನಸಂಖ್ಯೆ ಅಥವಾ ನಾಲ್ಕು ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಂದನ್ನು ೩೦ ಹಾಸಿಗೆಗಳ ಸೌಲಭ್ಯವುಳ್ಳ ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸುವ ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ.

ಇ) ಹೌದು.

ಶ್ರೀ ಜಿ. ಎಸ್. ಆಚಾರ್.— ಮಾನ್ಯ ಅಧ್ಯಕ್ಷರೇ, ಈ ಪರಿಷ್ಕೃತ ಯೋಜನೆ ಬಯಲು ಪದೇಶಕ್ಕೆ ಸರಿ ಆಗಬಹುದು ಆದರೆ ಗುಡ್ಡ, ಬೆಟ್ಟ ಗುಡ್ಡ ಇರುವ ಮಲೆನಾಡು ಪ್ರದ್ರೇಶದಲ್ಲಿ ಈ ೩೦ ಸಾವಿರ ಹಾಗೂ ೨೦ ಸಾವಿರ ಜನಸಂಖ್ಯೆಯ ಮಿತಿ ಸಮಂಜಸವಾಗುವುದಿಲ್ಲ. ಆದ್ದರಿಂದ ಹಿಂದೆ ಇದ್ದಹಾಗೆ ಪ್ರಾಥಮಿಕ ಆರೋಗ್ಯ ಘಟಕ ಅಥವಾ ರೂರಲ್ ಆಸ್ಪತ್ರೆಗಳನ್ನು ತೆರೆಯುವಹಾಗೆ ಕ್ರಮ ಕೈಗೊಳ್ಳುವಿರಾ? ೨೦ ಸಾವಿರ ಜನಸಂಖ್ಯೆಗೆ ಸಮೂದಾಯ ಆರೋಗ್ಯ ಕೇಂದ್ರ ಸ್ಥಾಪನೆ ಮಾಡುವುದಕ್ಕೆ ಸರ್ಕಾರ ಏನು ಕಾರ್ಯಕ್ರಮ ಹಾಕಿಕೊಂಡಿದೆ ? ೧೯೮೮–೮೯ ರಲ್ಲಿ ಎಷ್ಟು ಪ್ರಾಥಮಿಕ ಆರೋಗ್ಯ ಕೇಂದ್ರ, ಮತ್ತು ೩೦ ಹಾಸಿಗೆಗಳುಳ್ಳ ಸಮೂದಾಯ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಗುರಿ ಇದೆ?

ಶ್ರೀ ಬಿ. ರಾಚಯ್ಯ.—೧೯೮೮–೮೯ ರಲ್ಲಿ ಸುಮಾರು ೩೦೦ ಆರೋಗ್ಯ ಕೇಂದ್ರಗಳನ್ನು ತೆರೆಯುವ ಯೋಜನೆ ಇದೆ. ಮತ್ತೆ ಆದಿವಾಸಿಗಳು, ಗಿರಿಜನರು ಇರುವ ಕಡೆ ವಿಶೇಷ ಘಟಕ ಯೋಜನೆಯ ಅಡಿಯಲ್ಲಿ ೫೦ ಘಟಕಗಳನ್ನು ತೆಗೆಯುತಕ್ಕ ಯೋಜನೆ ಇದೆ.

ಪೋಲೀಸ್ ಇಲಾಖೆಯಲ್ಲಿರುವ ವಾಹನಗಳು

೧೬೩. ಶ್ರೀ ಶಿವಶೇಖರಪ್ಪ ಗೌಡ ಶಿರವಾಳ (ಶಹಾಪುರ) ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಪೋಲೀಸ್ ಅಧಿಕಾರಿಗಳಿಗೆ ಒದಗಿಸಿರುವ ವಾಹನಗಳು ಅಂದರೆ ಜೀಪು ಮತ್ತು ಮೋಟಾರು ಸೈಕಲ್ಲುಗಳೆಷ್ಟು ?

ಆ) ಆ ಪೈಕಿ ಎಷ್ಟು ಜೀಪುಗಳು ಉಪಯೋಗದಲ್ಲಿವೆ ಮತ್ತು ಎಷ್ಟು ದುರಸ್ತಿಯಲ್ಲಿವೆ ?

ಇ) ಗುಲ್ಬರ್ಗಾ ಜಿಲ್ಲೆಯ ಪೋಲೀಸ್ ಅಧಿಕಾರಿಗಳಿಗೆ ೧೯೮೪–೮೫ನೇ ಸಾಲಿನಿಂದ ೧೯೮೭–೮೮ನೇ ಸಾಲಿನ ವರೆಗೆ ಹೊಸದಾಗಿ ಒದಗಿಸಿದ ಜೀಪು ಮತ್ತು ಮೋಟಾರ್ ಸೈಕಲ್‌ಗಳ ಸಂಖ್ಯೆ ಎಷ್ಟು ?

ಈ) ಈ ರೀತಿ ಒದಗಿಸಿದ ಜೀಪುಗಳು ಮತ್ತು ಮೋಟಾರು ಸೈಕಲ್‌ಗಳು ಯಾವ ಯಾವ ಕಾರ್ಖಾನೆಗಳಿಂದ ಖರೀದಿಸಲಾಗಿದೆ.

ಉ) ಯಾದವಗಿರಿ ಸಬ್ ಡಿವಿಜನ್‌ಗೆ ಎಷ್ಟು ಜೀಪು ಮತ್ತು ಮೋಟಾರ್ ಸೈಕಲ್‌ಗಳಿಷ್ಟನ್ನು ಒದಗಿಸಲಾಗಿದೆ. ?